# ನಿಮ್ಮೊಡನೆ

## ಎರಡು ಗಮನಾರ್ಹ ತೀರ್ಪುಗಳು

ಕೆಲವು ಕಾಯ್ದೆಗಳಿರುತ್ತವೆ– ಅವುಗಳ ಉದ್ದೇಶ ಚೆನ್ನಾಗಿದ್ದರೂ ಒಟ್ಟಾರೆಯಾಗಿ ವ್ಯತಿರಿಕ್ತ ಶೈಕ್ಷಣಿಕ ಪರಿಣಾಮಗಳನ್ನು ಉಂಟು ಮಾಡುತ್ತವೆ. ಜ್ಞಾನ ಪ್ರಸಾರಕ್ಕೆ ಮತ್ತು ಮನರಂಜನೆಯ ಹಂಚಿಕೊಳ್ಳುವಿಕೆಗೆ ತಡೆಯೊಡ್ಡುತ್ತವೆ. ಇಂತಹ ಕಾಯ್ದೆಗಳ ಬಗ್ಗೆ ನ್ಯಾಯಾಲಯಗಳು ತೀರ್ಪು ನೀಡುವಾಗ ಸೂಕ್ಷ್ಮ ಸಂವೇದನೆಯನ್ನು ಹೊಂದುವುದು ಅಪೇಕ್ಷಣೀಯ. ಕಳೆದ ವಾರ ಇಂತಹ ಎರಡು ಕಾಯ್ದೆಗಳು ಕೋರ್ಟ್‌ಗಳಲ್ಲಿ ಸುದ್ದಿ ಮಾಡಿದವು. ಅದರಲ್ಲಿ ಒಂದು ಕಾಪಿರೈಟ್ ಕಾಯ್ದೆ ಮತ್ತು ಇನ್ನೊಂದು ಸಂಗೀತ ಕೃತಿಸ್ವಾಮ್ಯ ಕಾಯ್ದೆ. ಎರಡೂ ಪ್ರಕರಣಗಳಲ್ಲಿ ಕೋರ್ಟ್‌ಗಳು ಹೆಚ್ಚು ಸಂವೇದನಾಶೀಲವಾಗಿ ವಿಷಯವನ್ನು ಅವಲೋಕಿಸಿ ತೀರ್ಪುಗಳನ್ನು ನೀಡಿವೆ.

> ಶಿಕ್ಷಕ ವೃಂದ ವಿದ್ಯಾರ್ಥಿಗಳ ಓದಿನ ಅನುಕೂಲಕ್ಕಾಗಿ ಆಯ್ದ ಪುಸ್ತಕಗಳ ರೆಫರೆನ್ಸ್ ಕೊಡುವುದು ಜಗತ್ತಿನಾದ್ಯಂತ ಸಹಜ ವಿದ್ಯಮಾನವೇ. ವಾಸ್ತವವಾಗಿ ಭಾರೀ ಗಾತ್ರದ ಅಷ್ಟೂ ಪುಸ್ತಕಗಳನ್ನು ಖರೀದಿಸುವುದು ವಿದ್ಯಾರ್ಥಿಗಳಿಂದ ಸಾಧ್ಯವೂ ಇಲ್ಲ. ಹಾಗಾಗಿ ಫೋಟೊಕಾಪಿ ಜ್ಞಾನದ ಪ್ರಸಾರಕ್ಕೆ ವೇಗ ಕೊಡುತ್ತದೆ.

ದೆಹಲಿ ವಿಶ್ವವಿದ್ಯಾನಿಲಯ ತನ್ನ ಕ್ಯಾಂಪಸ್‌ನಲ್ಲಿ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಫೋಟೊಕಾಪಿ ಸೆಂಟರ್ ತೆರೆದಿದೆ. ಅಲ್ಲಿ ಎಲ್ಲ ವಿದ್ಯಾರ್ಥಿಗಳೂ ಭಾರೀ ಗಾತ್ರದ ಶೈಕ್ಷಣಿಕ ಪುಸ್ತಕಗಳ ನೂರಾರು ಪುಟಗಳನ್ನು ಫೋಟೊಕಾಪಿ ಮಾಡಿಕೊಳ್ಳುತ್ತಾರೆ. ಇದನ್ನು ಪ್ರಶ್ನಿಸಿ, 'ಈ ರೀತಿ ಫೋಟೋಕಾಪಿ ಮಾಡುವ ಮೂಲಕ ನಮ್ಮ ಪುಸ್ತಕಗಳ ಕಾಪಿರೈಟ್ ಕಾಯ್ದೆಯನ್ನು ಉಲ್ಲಂಘಿಸಲಾಗುತ್ತಿದೆ' ಎಂದು ಪ್ರತಿಷ್ಠಿತ ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್ ಮತ್ತು ಕೇಂಬ್ರಿಡ್ಜ್ ಯೂನಿವರ್ಸಿಟಿ ಪ್ರೆಸ್ ಸಹಿತ ಐದು ಅಂತರರಾಷ್ಟ್ರೀಯ ಪ್ರಕಾಶನ ಸಂಸ್ಥೆಗಳು ಕೋರ್ಟ್ ಮೆಟ್ಟಿಲೇರಿದ್ದವು. ಈ ಪ್ರಕಾಶಕರ ವಾದ ತರ್ಕಬದ್ಧವಾಗಿತ್ತು. 'ಪಠ್ಯಪುಸ್ತಕಗಳನ್ನು ಮುದ್ರಿಸುವುದಕ್ಕೆ ನಾವು ಭಾರೀ ಬಂಡವಾಳ ಹೂಡಿದ್ದೇವೆ. ಸಾವಿರಾರು ವಿದ್ಯಾರ್ಥಿಗಳು ನಮ್ಮ ಪಠ್ಯಗಳ ನೂರಾರು ಪುಟಗಳನ್ನು ಫೋಟೊಕಾಪಿ ಮಾಡಿದರೆ ನಮ್ಮ ಪುಸ್ತಕಗಳ ಮಾರಾಟಕ್ಕೆ ಹೊಡೆತ ಬೀಳುತ್ತದೆ. ಇದು ಕೃತಿಸ್ವಾಮ್ಯದ ಉಲ್ಲಂಘನೆ' ಎನ್ನುವುದು ಅವರ ವಾದವಾಗಿತ್ತು. ಆದರೆ ನ್ಯಾಯಮೂರ್ತಿಗಳು ಅವರ ವಾದವನ್ನು ಮಾನ್ಯ ಮಾಡಿಲ್ಲ. 'ಪುಸ್ತಕದ ಬಹುತೇಕ ಪುಟಗಳನ್ನು ಫೋಟೊಕಾಪಿ ಮಾಡಿದರೆ ಹಕ್ಕು ಉಲ್ಲಂಘನೆ ಆಗುತ್ತದೆ ಎನ್ನುವುದು ನಿಜ. ಆದರೆ ಕಾಪಿರೈಟ್ ಕಾಯ್ದೆಯನ್ನು ರೂಪಿಸಿರುವುದೇ ಜ್ಞಾನದ ಪ್ರಸರಣ ಹೆಚ್ಚಳಕ್ಕಾಗಿ; ನಿಯಂತ್ರಣಕ್ಕಾಗಿ ಅಲ್ಲ' ಎಂದು ಕೋರ್ಟ್ ಹೇಳಿದೆ.

ಈ ತೀರ್ಪಿನಿಂದ ವಿದ್ಯಾರ್ಥಿಗಳಿಗಂತೂ ಸಂತೋಷವಾಗಿದೆ. ಶಿಕ್ಷಕ ವೃಂದ ವಿದ್ಯಾರ್ಥಿಗಳ ಓದಿನ ಅನುಕೂಲಕ್ಕಾಗಿ ಆಯ್ದ ಪುಸ್ತಕಗಳ ರೆಫರೆನ್ಸ್ ಕೊಡುವುದು ಜಗತ್ತಿನಾದ್ಯಂತ ಸಹಜ ವಿದ್ಯಮಾನವೇ. ಹೀಗೆ ಕೋರ್ಸ್ ಪ್ಯಾಕ್‌ಗಳನ್ನು ತಯಾರಿಸಲು ಬೇರೆ ಬೇರೆ ಲೇಖಕರ ಬೃಹತ್ ಪಠ್ಯ ಪುಸ್ತಕಗಳ ಆಯ್ದ ಭಾಗಗಳನ್ನು ಅವರು ಸೂಚಿಸುತ್ತಾರೆ.  ವಾಸ್ತವವಾಗಿ ಭಾರೀ ಗಾತ್ರದ ಅಷ್ಟೂ ಪುಸ್ತಕಗಳನ್ನು ಖರೀದಿಸುವುದು ವಿದ್ಯಾರ್ಥಿಗಳಿಂದ ಸಾಧ್ಯವೂ ಅಲ್ಲ. ಅದಕ್ಕಿಂತ ಮುಖ್ಯವಾಗಿ ಇದೀಗ ಡಿಜಿಟಲ್ ಯುಗದಲ್ಲಿ ಕೈಯಲ್ಲಿರುವ ಸ್ಮಾರ್ಟ್‌ಫೋನ್ ವಿದ್ಯಾರ್ಥಿಗಳಿಗೆ ವರವಾಗಿ ಪರಿಣಮಿಸಿದೆ. ಬಹುಹೊತ್ತಿನವರೆಗೆ ಗ್ರಂಥಾಲಯಗಳಲ್ಲಿ ಕುಳಿತು ಓದುವ ಬದಲು ವಿದ್ಯಾರ್ಥಿಗಳು ಪಠ್ಯ ಅಥವಾ ರೆಫರೆನ್ಸ್ ಪುಸ್ತಕಗಳ ಬೇಕಾದ ಪುಟಗಳನ್ನು ಮೊಬೈಲ್‌ನಲ್ಲಿ ಫೋಟೊ ತೆಗೆದು, ಸಮಯ ಸಿಕ್ಕಾಗ ಓದಿಕೊಳ್ಳುತ್ತಾರೆ. ಸಹಪಾಠಿಗಳ ಜತೆಗೆ ಅದನ್ನು ಹಂಚಿಕೊಳ್ಳುವುದೂ ಸುಲಭ.

ಕಾಪಿರೈಟ್ ಕಾಯ್ದೆಯಲ್ಲೂ ಈ ಕುರಿತು ಸ್ಪಷ್ಟ ಉಲ್ಲೇಖಗಳಿವೆ. ಸೆಕ್ಷನ್ 14 (ಎ) (ii) ಪ್ರಕಾರ, ಸಾಹಿತ್ಯ, ನಾಟಕ ಮತ್ತು ಸಂಗೀತದ ಗ್ರಂಥಗಳ ಪ್ರತಿಗಳು ಮಾರುಕಟ್ಟೆಗೆ ಬರದೇ ಇದ್ದಾಗ ಮಾತ್ರ ಅವುಗಳ ಪುಟಗಳ ಫೋಟೊಕಾಪಿ ಮಾಡುವುದಾಗಲೀ, ಸಾರ್ವಜನಿಕ ಹಂಚಿಕೆಯಾಗಲೀ ತಪ್ಪು. ಹಾಗೆಯೇ ಸೆಕ್ಷನ್ 52 (1)(i) ಪ್ರಕಾರ, ಶೈಕ್ಷಣಿಕ ಉದ್ದೇಶಕ್ಕಾಗಿ ಸೂಚನಾ ಪರಿಕರಗಳನ್ನು ಫೋಟೊಕಾಪಿ ಮಾಡುವುದು ತಪ್ಪಲ್ಲ ಎಂದು ನ್ಯಾಯಾಧೀಶರು ಸ್ಪಷ್ಟಪಡಿಸಿದ್ದಾರೆ. ಈ ತೀರ್ಪು ಪ್ರಕಾಶಕ ವಲಯದಲ್ಲಿ ಅಸಮಾಧಾನ ಉಂಟು ಮಾಡಿದೆ. ಬಹುಶಃ ತಮ್ಮ ಕೃತಿಸ್ವಾಮ್ಯದ ಆದಾಯ ಗಳಿಕೆಯನ್ನು ರಕ್ಷಿಸಲು ಅವರು ಸರ್ಕಾರದ ಮೊರೆ ಹೋಗಬಹುದು.

ಇನ್ನೊಂದು ಪ್ರಕರಣದಲ್ಲಿ, ದೆಹಲಿ ಹೈಕೋರ್ಟ್ ನೀಡಿದ ತೀರ್ಪನ್ನು ಇಂಡಿಯನ್ ಫರ್ಫಾರ್ಮಿಂಗ್ ರೈಟ್ಸ್ ಸೊಸೈಟಿ ಲಿ. ಸಂಸ್ಥೆಯವರು ಸುಪ್ರೀಂಕೋರ್ಟಿನಲ್ಲಿ ಪ್ರಶ್ನಿಸಿದ್ದರು. ಈ ಪ್ರಕರಣದಲ್ಲಿ, ಸೌಂಡ್ ರೆಕಾರ್ಡಿಂಗ್ ಕಂಪೆನಿಗೆ ಶುಲ್ಕ ಕೊಟ್ಟ ಬಳಿಕ ಸಾರ್ವಜನಿಕವಾಗಿ ಆ ಹಾಡುಗಳನ್ನು ಹಾಕುವಾಗ ಮತ್ತೆ ಗೀತರಚನೆಕಾರರು ಮತ್ತು ಸಂಗೀತ ನಿರ್ದೇಶಕರಿಗೆ ಶುಲ್ಕ ಕೊಡಬೇಕಾದ ಅಗತ್ಯವಿಲ್ಲ ಎನ್ನುವ ಹೈಕೋರ್ಟ್ ತೀರ್ಪನ್ನು ಸುಪ್ರೀಂಕೋರ್ಟ್ ಎತ್ತಿಹಿಡಿದಿದೆ. ಇವತ್ತು ಬಹುತೇಕ ಸಮಾರಂಭಗಳಲ್ಲಿ ಸಂಗೀತ ಎನ್ನುವುದು ಅವಿಭಾಜ್ಯ ಅಂಗವೇ ಆಗಿರುವಾಗ, ಹಾಡುಗಳನ್ನು ಕೇಳಿಸಿಕೊಳ್ಳುವುದು ಸಂಸ್ಕೃತಿಯ ಭಾಗವೇ ಆಗಿರುವಾಗ, ಶುಲ್ಕದ ಕುರಿತು ಇಂತಹ ಕೂದಲು ಸೀಳುವ ವಾದಗಳನ್ನು ಮಾಡುವುದು ಖಂಡಿತಾ ಸರಿಯಲ್ಲ. ಕೋರ್ಟ್ ತೀರ್ಪು ಇದನ್ನು ಮತ್ತೆ ಸ್ಪಷ್ಟಪಡಿಸಿದೆ.


ಈಶ್ವರ್

■ **ಬಿ.ಎಂ.ಹನೀಫ್**